**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ,**
**ನಂಜನಗೂಡು**

**ಸಿಸಿ ಸಂಖ್ಯೆ : 218/2016**

ಫಿರ್ಯಾದುದಾರರು : ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

**ವಿರುದ್ಧ**

ಆರೋಪಿತರು :

1) ಕೂಸಪ್ಪ ಬಿನ್ ಪೋತಾಬೋವಿ,
ವಯಸ್ಸು ಸುಮಾರು 30 ವರ್ಷ,
ಚನ್ನಪಟ್ಟಣ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

2) ನಿಂಗರಾಜು ಬಿನ್ ಪೋತಾಬೋವಿ,
ವಯಸ್ಸು ಸುಮಾರು 35 ವರ್ಷ,
ಚನ್ನಪಟ್ಟಣ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

3) ರಾಜಬೋವಿ ಬಿನ್ ಪೋತಾಬೋವಿ,
ವಯಸ್ಸು ಸುಮಾರು 40 ವರ್ಷ,
ಚನ್ನಪಟ್ಟಣ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

4) ಲೋಕೇಶ ಬಿನ್ ಪೋತಾಬೋವಿ,
ವಯಸ್ಸು ಸುಮಾರು 24 ವರ್ಷ,
ಚನ್ನಪಟ್ಟಣ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

5) ರಾಜೇಂದ್ರ ಬಿನ್ ಪೋತಾಬೋವಿ,
ವಯಸ್ಸು ಸುಮಾರು 30 ವರ್ಷ,
ಚನ್ನಪಟ್ಟಣ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

:: **ದೋಷಾರೋಪಣೆ** ::

*ಶ್ರೀ ರಘುರಾಮ ಎಸ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 15.08.2015 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಂಜನಗೂಡಿನ ಹುಲ್ಲಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚನ್ನಪಟ್ಟಣ ಗ್ರಾಮದ ಕಂಟ್ರಾಕ್ಟರ್ ಮಾದಾಭೋವಿಯವರ ಮನೆಯ ಮುಂಭಾಗದಲ್ಲಿರುವ ಮುಖ್ಯ ರಸ್ತೆಯಲ್ಲಿ ಚಾಸಾ-1 ರವರು ಬರುತ್ತಿರುವಾಗ, ಚಾಸಾ-1 ರವರ ತಮ್ಮನ ಮೇಲೆ ಚೀಟಿ ಹಣದ ವಿಚಾರದಲ್ಲಿ ಗಲಾಟೆ ಮಾಡಿದ್ದು, ಈ ಸಂಬಂಧ 1 ರಿಂದ 5ನೇ ಆರೋಪಿತರಾದ ತಾವುಗಳು ಅಕ್ರಮ ಗುಂಪನ್ನು ಕಟ್ಟಿಕೊಂಡ್ಡಿರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, ಅಕ್ರಮ ಗುಂಪನ್ನು ಕಟ್ಟಿಕೊಂಡು ದೊಂಬಿಯನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, ಅಕ್ರಮ ಗುಂಪನ್ನು ಕಟ್ಟಿಕೊಂಡು ಕೈಯಲ್ಲಿ ಕಬ್ಬಿಣದ ರಾಡು

ಮತ್ತು ಮಚ್ಚನ್ನು ಹಿಡಿದುಕೊಂಡು ದೊಂಬಿಯನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, ಚಾಸಾ-1 ರವರನ್ನು ಅಡ್ಡಗಟ್ಟಿ ಹಿಡಿದುಕೊಂಡು ಎಲ್ಲಿಗೂ ಹೋಗಲು ಬಿಡದೆ ಚಾಸಾ-1 ರವರಿಗೆ ಅಕ್ರಮ ತಡೆಯುಂಟು ಮಾಡಿರುವ ಕಾರಣ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಐದನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, 1 ನೇ ಆರೋಪಿತರಾದ ತಾವು ಕಬ್ಬಿಣದ ರಾಡಿನಿಂದ ಚಾಸಾ-1 ರವರ ಮುಂಗೈಗೆ ಹಲ್ಲೆ ಮಾಡಿದ್ದು, 4 ನೇ ಆರೋಪಿತರಾದ ತಾವು ಕಲ್ಲಿನಿಂದ ಚಾಸಾ-1 ರವರ ಮೂಗಿಗೆ ಹೊಡೆದು ನೋವುಂಟು ಮಾಡಿದ್ದು, 5 ನೇ ಆರೋಪಿತರಾದ ತಾವು ಮಚ್ಚಿನಿಂದ ಚಾಸಾ-1 ರವರ ಬಲ ಕತ್ತಿಗೆ ಹೊಡೆದು ನೋವುಂಟು ಮಾಡಿದ್ದು, 2 ನೇ ಆರೋಪಿತರಾದ ತಾವು ಅದೇ ರಾಡಿನಿಂದ ಚಾಸಾ-1 ರವರ ಚಲದ ಕಾಲಿನ ಮಂಡಿಗೆ ಹೊಡೆದು ನೋವುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಆರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, 3 ನೇ ಆರೋಪಿತರಾದ ತಾವು ಚಾಸಾ-1 ರವರ ಮೈ ಕೈಗೆ ಕಾಲಿನಿಂದ ತುಳಿದು ನೋವುಂಟು ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ

ಕಲಂ 323 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಣೆಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.